ದಿನಾಂಕ: 28-02-2009ರಂದು ಶನಿವಾರ ಅಪರಾಹ್ನ 3-00 ಗಂಟೆಗೆ ಸರಿಯಾಗಿ ಉಳ್ಳಾಲ ಪುರಸಭೆಯ ಕಚೇರಿಯ ಸಭಾಂಗಣದಲ್ಲಿ ಪುರಸಭಾ ಅಧ್ಯಕ್ಷರಾದ ಶ್ರೀ ಯು.ಎ ಇಸ್ಮಾಯಿಲ್ ಇವರ ಅಧ್ಯಕ್ಷತೆಯಲ್ಲಿ ಜರಗಿದ ಸಾಮಾನ್ಯ ಸಭೆಯ ನಡವಳಿಗಳು

ಹಾಜರಿ: ಅಧ್ಯಕ್ಷರು ಮತ್ತು ಸದಸ್ಯರು
--------

ವಿಷಯ: 458: ಹಿಂದಿನ ಸಾಮಾನ್ಯ ಸಭೆಯ ನಡವಳಿ (30-01-2009) ಮತ್ತು ಸ್ಥಾಯಿಸಮಿತಿ ಸಭೆಯ ನಡವಳಿ(19-02-2009)ಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ವಿಷಯ ಸಂಖ್ಯೆ: 435ಕ್ಕೆ ಸಂಬಂಧಿಸಿದಂತೆ ನಿರ್ಣಯದಲ್ಲಿ 20ನೇ ವಾರ್ಡಿನ ಕು.ಭವಾನಿಯವರನ್ನು ಹೊರತುಪಡಿಸಿ ಎಂಬುದಾಗಿ ನಿರ್ಣಯ ಕೈಗೊಂಡಿದ್ದು ಇದನ್ನು ತಿದ್ದುಪಡಿ ಮಾಡಿ ಕು.ಭವಾನಿಯವರ ಸಹಿತ ಎಂಬುದಾಗಿ ತಿದ್ದುಪಡಿ ಮಾಡುವುದಾಗಿ ಸರ್ವಾನುಮತದಿಂದ ನಿರ್ಣಯಿಸಲಾಯಿತು.

ವಿಷಯ: 459: ನವೆಂಬರ್ 2008 ಮತ್ತು ಡಿಸೆಂಬರ್ 2008 ತಿಂಗಳ ಜಮಾಖರ್ಚು ಪರಿಶೀಲಿಸಿ ಮಂಜೂರು ಮಾಡುವ ಬಗ್ಗೆ.
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಪರಿಶೀಲಿಸಿ ಮಂಜೂರು ಮಾಡಲಾಯಿತು.

ವಿಷಯ: 460: 2009-2010ನೇ ಬಜೆಟ್ ಮಂಡನೆ
ನಿರ್ಣಯ: 2009-2010ನೇ ಸಾಲಿನ ಬಜೆಟ್ ಬಗ್ಗೆ ಚರ್ಚಿಸಿ ಮಂಜೂರು ಮಾಡಲಾಯಿತು.

| | 2008-09ನೇ ಸಾಲಿನ ಪರಿಷ್ಕೃತ ಅಂದಾಜು ಆಯವ್ಯಯ | 2009-2010ನೇ ಸಾಲಿನ ಅಂದಾಜು ಆಯವ್ಯಯ |
|---|---|---|
| ಪ್ರಾರಂಭಿಕ ಶಿಲ್ಕು | 3,22,76,162-00 | 2,92,77,999-00 |
| ಜಮೆ | 6,55,12,492-00 | 6,57,15,000-00 |
| ಒಟ್ಟು | 9,77,88,654-00 | 9,49,92,999-00 |
| ಖರ್ಚುಗಳು | 6,85,10,655-00 | 9,02,44,003-00 |
| ಉಳಿತಾಯ | 2,92,77,999-00 | 47,48,996-00 |

ವಿಷಯ: 461: ಉಳ್ಳಾಲ ಪುರಸಬೆ ವ್ಯಾಪ್ತಿಯ ನೀರು ಸರಬರಾಜು ವ್ಯವಸ್ಥೆ ಬಗ್ಗೆ ಸಿಮ್ಯಾಕ್ ಬೆಂಗಳೂರಿನಿಂದ ಪರಿಶೀಲನೆಗೆ ಬಂದ ವಿಷಯ ತಜ್ಞರಾದ ಶ್ರೀ ಗೋಪಾಲರಾವ್‌ರವರು ಇಮೇಲ್ ಮುಖಾಂತರ ಕಳುಹಿಸಿದ ಸಮಗ್ರ ವರದಿ ಕುರಿತು.
ನಿರ್ಣಯ: ಸಭೆಯಲ್ಲಿ ಸಮಗ್ರ ವರದಿಯನ್ನು ವಿವರವಾಗಿ ತಿಳಿಸಲಾಯಿತು.

ವಿಷಯ: 462: ಉಳ್ಳಾಲ ಪುರಸಭಾ ವ್ಯಾಪ್ತಿಯ ಪೆರ್ಮನ್ನೂರು ಗ್ರಾಮದ ಬಬ್ಬುಕಟ್ಟೆ ಬಳಿ ಬಸ್ಸು ಕಮರಿಗೆ ಬಿದ್ದು ಗಾಯಗೊಂಡವರಿಗೆ ಪುರಸಭೆ ವತಿಯಿಂದ ನೇತಾಜಿ ಎಲ್ಲಪ್ಪ ಮೆಮೋರಿಯಲ್ ಆಸ್ಪತ್ರೆ ತೊಕ್ಕೋಟ್ಟು ಇವರಿಗೆ ರೂ 10,000-00ವನ್ನು ನೀಡುವಂತೆ ಸಹಾಯಕ ಆಯುಕ್ತರು ಮಂಗಳೂರು ಇವರ (ದಿನಾಂಕ 17-02-2009) ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 463: ಮಂಗಳೂರು ತಾಲ್ಲೂಕು ಪೆರ್ಮನ್ನೂರು ಗ್ರಾಮದ ಸರ್ವೆನಂಬ್ರ: 73-14ರಲ್ಲಿ 0-09ಸೆಂಟ್ಸ್ ಸ್ಥಳ ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್(ನಿ) ಕೋಟೆಕಾರು ಮಂಗಳೂರು ಇವರಿಗೆ ಜಮೀನು ಮಂಜೂರಾತಿ ನೀಡುವರೇ ನಿರಾಕ್ಷೇಪಣಾ ಪತ್ರ ನೀಡುವಂತೆ ತಹಶೀಲ್ದಾರರು, ಮಂಗಳೂರು ಇವರ ಪತ್ರದ ಕುರಿತು.
ನಿರ್ಣಯ:ಈ ಬಗ್ಗೆ ಚರ್ಚಿಸಲಾಗಿ ಪ್ರಧಾನ ವ್ಯವಸ್ಥಾಪಕರು ಕೋಟೆಕಾರು ಸೇವಾ ಸಹಕಾರಿ ಸಂಘ(ನಿ) ಇವರ ಪತ್ರದಂತೆ ಪರಿಶೀಲಿಸಲಾಯಿತು. ಮಾನ್ಯ ಜಿಲ್ಲಾಧಿಕಾರಿಯವರ ಪೂರ್ವಾನುಮತಿಯನ್ನು ಪಡೆದುಕೊಂಡು ಸದ್ರಿ ಸ್ಥಳವನ್ನು ಕೋಟೆಕಾರು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್(ನಿ)ಕ್ಕೆ ನೀಡುವರೇ ನಿರಾಕ್ಷೇಪಣಾ ಪತ್ರ ನೀಡುವುದಾಗಿಯೂ ಮತ್ತು ಪ್ರತಿಯನ್ನು ಮಾನ್ಯ ತಹಶೀಲ್ದಾರರವರಿಗೆ ಕಳುಹಿಸಿಕೊಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 464: 2007–08ನೇ ಸಾಲಿನಲ್ಲಿ ಎಸ್.ಎಫ್.ಸಿಯಲ್ಲಿ ರೂ 53.00ಲಕ್ಷವನ್ನು ಭೂಸ್ವಾಧೀನಕ್ಕೆ ನೀಡಿದ ಹಣವನ್ನು ಭೂಸ್ವಾಧೀನಾಧಿಕಾರಿಯವರು ಹಿಂತಿರುಗಿಸಿರುವುದರಿಂದ ರೂ 53.00ಲಕ್ಷವನ್ನು ಕ್ರಿಯಾಯೋಜನೆ ಮಾಡಿ ಮಾನ್ಯ ಜಿಲ್ಲಾಧಿಕಾರಿಯವರಿಗೆ ಅನುಮೋದನೆಗೆ ಕಳುಹಿಸಿದಾಗ ಭೂಸ್ವಾಧೀನಕ್ಕೆ ಮುಂದಿನ ವರ್ಷದಿಂದ ಪುರಸಭೆಯಿಂದ ಹಣ ಪಾವತಿಸಲು ಸರ್ಕಾರದಿಂದ ನಿರ್ದೇಶನ ಬಂದಲ್ಲಿ 2009–2010ನೇ ಸಾಲಿನ ಎಲ್ಲಾ ಕಾಮಗಾರಿಗಳನ್ನು ಬದಿಗಿಟ್ಟು ಭೂಸ್ವಾಧೀನಕ್ಕೆ ನಿಗದಿಪಡಿಸಲಾಗುವ ಹಣವನ್ನು ಪಾವತಿಸಲು ಒಪ್ಪಿ ನಿರ್ಣಯ ಮಾಡಿದರೆ ಮಾತ್ರ ಈ ಪ್ರಸ್ತಾವನೆಗೆ ಒಪ್ಪಿ ಮಾನ್ಯ ಜಿಲ್ಲಾಧಿಕಾರಿಯವರು ಶರತ್ತನ್ನು ವಿಧಿಸಿ ಕ್ರಿಯಾಯೋಜನೆ ಮಂಜೂರು ಮಾಡಿದ್ದು ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಶರತ್ತನ್ನು ಒಪ್ಪುವುದಾಗಿ ನಿರ್ಣಯಿಸಲಾಯಿತು.

ವಿಷಯ:465: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಉಪನೋಂದಾಣಿಕಚೇರಿ, ದ.ಕ ಇವರ ಪರಿಷ್ಕೃತ ದರದಂತೆ ಕಟ್ಟಡ ಪರವಾನಿಗೆ ಶುಲ್ಕ ನಿಗದಿಪಡಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಈಗಿನ ದರವನ್ನೇ ಮುಂದುವರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 466: ಉಳ್ಳಾಲ ಪುರಸಭಾ ವ್ಯಾಪ್ತಿಯಲ್ಲಿ ಸ್ವಯಂಘೋಷಿತ ಆಸ್ತಿ ತೆರಿಗೆಯನ್ನು ವಾಸ್ತವ್ಯ ಕಟ್ಟಡಗಳಿಗೆ 0.6% ಮತ್ತು ವಾಣಿಜ್ಯ ಕಟ್ಟಡಗಳಿಗೆ 1% ಆಸ್ತಿ ತೆರಿಗೆಯನ್ನು ಹೆಚ್ಚಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಸರ್ಕಾರದ ಆದೇಶದಂತೆ ಉಳ್ಳಾಲ ಪುರಸಭಾ ವ್ಯಾಪ್ತಿಯ ಕಟ್ಟಡ ತೆರಿಗೆ ಪರಿಷ್ಕರಣೆಯ ಕುರಿತು ಪೂರ್ಣ ಪ್ರಮಾಣದ ಮಾಹಿತಿಯನ್ನು ಮುಖ್ಯಾಧಿಕಾರಿಯವರು ಸದನಕ್ಕೆ ನೀಡಿದರೂ ಸದನ ಒಪ್ಪದೆ ಈಗ ಇರುವ ತೆರಿಗೆಯನ್ನು ಮುಂದುವರಿಸಿಕೊಂಡು ಹೋಗುವಂತೆ ತೀರ್ಮಾನಿಸಲಾಯಿತು.

ವಿಷಯ: 467: ಉಳ್ಳಾಲ ಪುರಸಭೆ ವ್ಯಾಪ್ತಿಯ 20ನೇ ವಾರ್ಡು 3ನೇ ಅಡ್ಡರಸ್ತೆಯ ಜೆ.ಬಿ. ಬೇಕರಿಯವರ ಮನೆಹತ್ತಿರದಿಂದ ನೀರಿನ ಪೈಪುಗಳಲ್ಲಿ ಮಣ್ಣು ತುಂಬಿದ್ದು, ಹಲವಾರು ಮನೆಗಳಿಗೆ ನೀರು ಇಲ್ಲದಿರುವುದರಿಂದ ಈ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ ಸ್ಥಳೀಯ ಸದಸ್ಯರಾದ ಕು.ಭವಾನಿ ಇವರ ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನೀರು ಸರಬರಾಜು ಮಾಡಲು ಕ್ರಮಕೈಗೊಳ್ಳುವುದಾಗಿ ನಿರ್ಣಯಿಸಲಾಯಿತು.

ವಿಷಯ: 468: ರಾಜ್ಯಮಟ್ಟದ ಬೆಂಚ್‌ಪ್ರೆಸ್ ಮತ್ತು ದ.ಕ. ಜಿಲ್ಲಾ ಮಟ್ಟದ ಮಹಿಳೆಯರ ಹಾಗೂ ಪುರುಷರ ಪವರ್ ಲಿಫ್ಟಿಂಗ್ ಸ್ಪರ್ಧಾಕೂಟಕ್ಕೆ ಆರ್ಥಿಕ ಧನಸಹಾಯ ನೀಡುವ ಬಗ್ಗೆ ಶ್ರೀ ಶೇಖರ ಬಟ್ನಗರ ಅಧ್ಯಕ್ಷರು ಹಾಗೂ ಶಿಕ್ಷಕರು ಶ್ರೀ ಶಕ್ತಿಬಾರತ್ ವ್ಯಾಯಾಮ ಶಾಲೆ(ರಿ) ಭಟ್ನಗರ ತೊಕ್ಕೊಟ್ಟು ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ರೂ. 2000/– ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 469: ಉಳ್ಳಾಲ ಪುರಸಭಾ ವ್ಯಾಪ್ತಿಯ ತೊಕ್ಕೊಟ್ಟು ಬಸ್ಸು ನಿಲ್ದಾಣದಲ್ಲಿ ರಿಕ್ಷಾ ಪಾರ್ಕಿಂಗ್ ದೊರಕಿಸಿಕೊಡುವ ಬಗ್ಗೆ ಅಧ್ಯಕ್ಷರು ಅಟೋ ರಿಕ್ಷಾ ಚಾಲಕ ಮಾಲಕರ ಸಂಘ(ರಿ) ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ನಕ್ಷೆ ತಯಾರಿಸಿ ನಂತರ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿಕೊಡುವುದಾಗಿ ನಿರ್ಣಯಿಸಲಾಯಿತು

ವಿಷಯ: 470: ಉಳ್ಳಾಲ ಪುರಸಭಾ ವ್ಯಾಪ್ತಿಯ ಹಝ್ರುತ್ ಸಯ್ಯದ್ ಮಹಮ್ಮದ್ ಶರೀಫುಲ್ ಮದನಿ(ರ.ಅ) ದರ್ಗಾದ ಹತ್ತೊಂಬತ್ತನೇ ಉರೂಸು ಸಮಾರಂಭಕ್ಕೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯ ಮತ್ತು ಇನ್ನಿತರ ಅಭಿವೃದ್ಧಿ ಕಾರ್ಯಕ್ಕೆ ರೂ. 5ಕೋಟಿ ಅನುದಾನವನ್ನು ಸರಕಾರದಿಂದ ಬಿಡುಗಡೆಗೊಳಿಸುವರೇ ಸರಕಾರದ ಗಮನಕ್ಕೆ ತಂದು ಅನುದಾನ ಬಿಡುಗಡೆ ಬಗ್ಗೆ ಪುರಸಭೆ ವತಿಯಿಂದ ಮನವಿ ಪತ್ರ ಕಳುಹಿಸಿಕೊಡಬೇಕಾಗಿ ಅಧ್ಯಕ್ಷರು, ಉಳ್ಳಾಲ ಜುಮ್ಮಾ ಮಸೀದಿ ಮತ್ತು ಸಯ್ಯದ್ ಮಹಮ್ಮದ್ ಶರೀಫುಲ್ ಮದನಿದರ್ಗಾ ಉಳ್ಳಾಲರವರ ದಿನಾಂಕ 15–1–2009ರಂದು ಅಧ್ಯಕ್ಷರು ಮುಖ್ಯಾಧಿಕಾರಿಯವರಿಗೆ ಬರೆಕೊಂಡ ಪತ್ರದ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಉಳ್ಳಾಲ ಪುರಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಸ್ಥಾಯಿಸಮಿತಿ ಅಧ್ಯಕ್ಷರು ಮತ್ತು ಸಂಬಂದಪಟ್ಟ ಪುರಸಭಾ ಸದಸ್ಯರು ಮತ್ತು ಊರಿನ ಗಣ್ಯರು ಸಭೆ ಸೇರಿ ಆ ಸಭೆಯಲ್ಲಿ ನಿರ್ಣಯ ಮಾಡಿ ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿ ಸರಕಾರಕ್ಕೆ ಕಳುಹಿಸಿಕೊಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 471: 2008-09ನೇ ಸಾಲಿನಲ್ಲಿ ಪುರಸಭೆಗೆ ಟಾಟಾ ಸುಮೋ ವಾಹನ ಒದಗಿಸಿದ ಜಯಂತ್ ಕುಮಾರ್ ಇವರು 2009-2010ನೇಸಾಲಿಗೆ ಅದೇ ದರದಲ್ಲಿ ಮುಂದುವರಿಸುವಂತೆ ಕೋರಿ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ 2009-2010ನೇ ಸಾಲಿಗೆ ಅದೇ ದರದಲ್ಲಿ ಮುಂದುವರಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 472: ತೊಕ್ಕೊಟ್ಟು ನೂತನ ಬಸ್ಸು ನಿಲ್ದಾಣದ ಹಿಂಬಾಗದ ಏರು ಗುಡ್ಡೆಯ ಮಣ್ಣು ತೆಗೆದು ಸಮತಟ್ಟುಗೊಳಿಸಿ ಸುಂದರಗೊಳಿಸಿ ಉದ್ಘಾಟನೆಗೆ ಸಜ್ಜುಗೊಳಿಸುವ ಬಗ್ಗೆ
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 473: ಉಳ್ಳಾಲ ಪುರಸಭೆ ವ್ಯಾಪ್ತಿಯ ತೊಕ್ಕೊಟ್ಟು ಬಸ್ಸು ನಿಲ್ದಾಣದ(ಎಡಿಬಿ) ವಾಣಿಜ್ಯ ಸಂಕೀರ್ಣದ ಸ್ಟಾಲು ಮತ್ತು ಪುರಸಭೆ ಕಚೇರಿ ಬಳಿ ಇರುವ ಸ್ಟಾಲ್‌ಗಳನ್ನು ಮಾನ್ಯ ಜಿಲ್ಲಾಧಿಕಾರಿಯವರ ಮತ್ತು ಮಾನ್ಯ ಪೌರಾಡಳಿತ ನಿರ್ದೇಶಕರ ಆದೇಶದಂತೆ 2009-2010ನೇ ಸಾಲಿಗೆ ಏಲಂ ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮಾನ್ಯ ಜಿಲ್ಲಾಧಿಕಾರಿಯವರ ಹಾಗೂ ಮಾನ್ಯ ಪೌರಾಡಳಿತ ನಿರ್ದೇಶಕರು ಬೆಂಗಳೂರು ಇವರ ಆದೇಶದಂತೆ ನಿಯಮಾನುಸಾರ 2009-2010ನೇ ಸಾಲಿಗೆ ಏಲಂ ಮಾಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 474: ವಿವಿಧ ಲೆಕ್ಕ ಶೀರ್ಷಿಕೆಯ ಟೆಂಡರು ಅನುಮೋದನೆ ಕುರಿತು
474(1) :12ನೇ ಹಣಕಾಸು ಯೋಜನೆ: ಉಳ್ಳಾಲ ಪುರಸಭಾ ವ್ಯಾಪ್ತಿಯ ಮುಕ್ಕಚೇರಿ ಸುಂದರಿಬಾಗ್‌ನಿಂದ ಮಾಸ್ತಿಕಟ್ಟೆ ಹೋಗುವ ರಸ್ತೆ ಕಾಂಕ್ರೀಟಿಕರಣ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ ಸೂಚಿಸಿದ ಬಿ.ಎಸ್. ಶರೀಫ್ ಜೋಕಟ್ಟೆ ಇವರು ನಮೂದಿಸಿದ 7.5% ಅಧಿಕ ದರವನ್ನು ಪುರಸಭೆ ಒಪ್ಪದೆ ಮಾತುಕತೆಗೆ ಕರೆದು ನೆಗೋಷಿಯೇಶನ್ ಪ್ರಕಾರ 7% ಅಧಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ:474(2) ಉಳ್ಳಾಲ ಪುರಸಭಾ ವ್ಯಾಪ್ತಿಯ ಹೈದಾರಾಲಿ ರಸ್ತೆಯಿಂದ ಬಾಬು ಕಂಪೌಂಡು ಮನೆತನಕ ರಸ್ತೆ ಕಾಂಕ್ರೀಟಿಕರಣ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ ಸೂಚಿಸಿದ
ಶ್ರೀ ಸಂಶುದ್ದೀನ್ ಹರೇಕಳ ಇವರು ನಮೂದಿಸಿದ 8% ಅಧಿಕ ದರವನ್ನು ಪುರಸಭೆ ಒಪ್ಪದೆ ಮಾತುಕತೆಗೆ ಕರೆದು ನೆಗೋಷಿಯೇಶನ್ ಪ್ರಕಾರ 7.5% ಅಧಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ:474(3): ಉಳ್ಳಾಲ ಪುರಸಭಾ ವ್ಯಾಪ್ತಿಯ ಮಾರ್ಗತಲೆಸೇತುವೆ ಬಳಿಯಿಂದ ಅರ್ಚಿ ಮನೆ ಬಳಿಯ ರಸ್ತೆ ಕಾಂಕ್ರೀಟಿಕರಣ ಮತ್ತು ಬದಿಕಟ್ಟುವ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ ಸೂಚಿಸಿದ ಶ್ರೀ ಮಹಮ್ಮದ್ ಕುಂಞ ಹಂಪನಕಟ್ಟಾ ಮಂಗಳೂರು ಇವರು ನಮೂದಿಸಿದ 8% ಅಧಿಕ ದರವನ್ನು ಪುರಸಭೆ ಒಪ್ಪದೆ ಮಾತುಕತೆಗೆ ಕರೆದು ನೆಗೋಶಿಯೇಶನ್ ಪ್ರಕಾರ 7.5% ಅದಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ: 474(4) ಉಳ್ಳಾಲ ಪುರಸಭೆ ವ್ಯಾಪ್ತಿಯ ಮಂಚಿಲ ಮುಖ್ಯ ರಸ್ತೆಯಿಂದ ಅಬ್ದುಲ್ ರಜಾಕ್ (ಸಫರ್ ಕ್ಲಬ್) ರಸ್ತೆ ಕಾಂಕ್ರೀಟರಣ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ ಸೂಚಿಸಿದ ಶ್ರೀ ಮಹಮ್ಮದ್ ಕುಂಞ,ಮಂಗಳೂರು ಇವರು ನಮೂದಿಸಿದ 8% ಅದಿಕ ದರವನ್ನುಪುರಸಭೆ ಒಪ್ಪದೆ ಮಾತುಕತೆಗೆ ಕರೆದು ನೆಗೋಷಿಯೇಶನ್ ಪ್ರಕಾರ 7.5%ಅಧಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ:474(5) ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡು ಕಲ್ಲಾಪುಪಟ್ಲ ಬಾಬು ಅಂಗಡಿಯಿಂದ ತಾರಿಪಡ್ಪುವಿಗೆ ಹೋಗುವ ದಾರಿ ಅಗಲೀಕರಣ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಲಾಯಿತು. ಕನಿಷ್ಟ ದರ ಸೂಚಿಸಿದ ಕುಂಞಕೋಯ ತಂಗಳ್, ಕಾಸರಗೋಡು ಇವರು ನಮೂದಿಸಿದ 8% ಅಧಿಕ ದರವನ್ನು ಪುರಸಭೆ ಒಪ್ಪದೆ ಮಾತುಕತೆಗೆ ಕರೆದು ನೆಗೋಷಿಯೇಶನ್ ಪ್ರಕಾರ 7.5% ಅಧಿಕ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

**ಅಧ್ಯಕ್ಷರು ಅನುಮತಿ ಮೇರೆಗೆ ಬರಬಹುದಾದ ಇತರ ವಿಷಯಗಳು**

ವಿಷಯ:475: ಉಳ್ಳಾಲ ಪುರಸಭಾ ವ್ಯಾಪ್ತಿಯ 5ನೇ ವಾರ್ಡು ಕೆಳಗಿನಬೀದಿ ಟೈಲ್ಸ್ ಕಾರ್ಖಾನೆಯ ಒಳಚರಂಡಿಯ ಚಪ್ಪಡಿಕಲ್ಲು ತೆಗೆದು ಹೂಳೆತ್ತಿ ಮಣ್ಣನ್ನು ದೂರಕ್ಕೆ ಸಾಗಿಸಿ ಚಪ್ಪಡಿಕಲ್ಲನ್ನು ಪುನ:ಜೋಡಿಸುವ ಕಾಮಗಾರಿಗೆ ಬಂದ ಕೋಟೇಶನುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು
ನಿರ್ಣಯ: ಈ ಬಗ್ಗೆ ಬಂದ ಟೆಂಡರುಗಳನ್ನು ಪರಿಶೀಲಿಸಿ ಶ್ರೀ ವಿಜಯ ಕುಮಾರ್‌ರವರು ಸೂಚಿಸಿದ ದರ ರೂ. 9850/- ಕನಿಷ್ಟ ದರವಾಗಿದ್ದು, ಸದ್ರಿ ದರವನ್ನು ಒಪ್ಪಿ ಮಂಜೂರು ಮಾಡಲಾಯಿತು.

ವಿಷಯ:476: ಉಳ್ಳಾಲ ಪುರಸಬಾ ವ್ಯಾಪ್ತಿಯ ವಾರ್ಡುಸಂಖ್ಯೆ 23ರ ಪೋಡಿಮೋನು ಅಂಗಡಿಯಿಂದ ಕಲ್ಲಾಪುಪಟ್ಲಾ ಮುಖ್ಯರಸ್ತೆ ಸಂಪರ್ಕಿಸುವ ರಸ್ತೆ ಅಭಿವೃದ್ದಿ ಕಾಮಗಾರಿಗೆ ಬಂದ ಟೆಂಡರುಗಳನ್ನು ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಬಂದ ಕೋಟೇಶನುಗಳನ್ನು ಪರಿಶೀಲಿಸಿ ಅತೀ ಕಡಿಮೆ ದರ ಸೂಚಿಸಿದ ಶ್ರೀ ವಿಜಯಕುಮಾರ್ ಉಳ್ಳಾಲಬೈಲು ಇವರು ಅಂದಾಜುಪಟ್ಟಿ ದರದಲ್ಲಿ ಗುತ್ತಿಗೆ ಮಾಡುವರೇ ಒಪ್ಪಿರುವುದನ್ನು ಮಂಜೂರು ಮಾಡಲಾಯಿತು.

ವಿಷಯ: 477: ಉಳ್ಳಾಲ ಪುರಸಬಾ ವ್ಯಾಪ್ತಿಯ 19ನೇ ವಾರ್ಡಿನ ವೈದ್ಯನಾಥ ನಗರದಲ್ಲಿ ಇರುವ ಕೊಳವೆಬಾವಿಯಲ್ಲಿ ನೀರಿಲ್ಲದ ಕಾರಣ ಅದರ ಹತ್ತಿರದಲ್ಲಿ ಹೊಸಕೊಳವೆಬಾವಿಯನ್ನು ತೋಡಿದ್ದು, ಅದಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಿ ಮತ್ತು ಇತರ ಎಲ್ಲಾ ಕಾಮಗಾರಿಗಳನ್ನು ಮಾಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ದಯಾನಂದ ತೊಕ್ಕೋಟ್ಟು ಇವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:478(1) ಉಳ್ಳಾಲ ಪುರಸಭಾ ವ್ಯಾಪ್ತಿಯ 11ನೇ ವಾರ್ಡು ಕೈಕೋರಸ್ತೆಗೆ 15ಲೋಡು ಮಣ್ಣು ಹಾಕಿ ಸಮತಟ್ಟು ಮಾಡುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 478(2) ಉಳ್ಳಾಲ ಪುರಸಭಾ ವ್ಯಾಪ್ತಿಯ 1ನೇ ವಾರ್ಡು ಕೋಟೆಪುರ ಸುಲ್ತಾನ್ ಬಸ್ಸು ನಿಲ್ದಾಣ ಮುಖ್ಯರಸ್ತೆ ಬದಿಗೆ 10ಲೋಡು ಮಣ್ಣುಹಾಕಿ ದುರಸ್ತಿ ಪಡಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:478(3) ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡು ಕಕ್ಕೆತೋಟ ನೂತನ್ ರವರ ಮನೆಗೆ ಹೋಗುವ ರಸ್ತೆಗೆ 5ಲೋಡು ಮಣ್ಣು ಹಾಕಿ ದುರಸ್ತಿ ಪಡಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 478(4) ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡು ಶೀನಕಂಪೌಂಡು 2ನೇ ಅಡ್ಡರಸ್ತೆಗೆ 10ಲೋಡು ಮಣ್ಣು ಹಾಕಿ ರಸ್ತೆ ಅಭಿವೃದ್ಧಿ ಪಡಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:478(5) ಉಳ್ಳಾಲ ಪುರಸಭೆ ವ್ಯಾಪ್ತಿಯ 9ನೇ ವಾರ್ಡು ದಾಬಾನ ರಸ್ತೆಗೆ 5ಲೋಡು ಮಣ್ಣು ಹಾಕಿ ರಸ್ತೆ ದುರಸ್ತಿ ಪಡಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:478(6) ಉಳ್ಳಾಲ ಪುರಸಭಾ ವ್ಯಾಪ್ತಿಯ 12ನೇ ವಾರ್ಡು ಹಿಲರಿಯಾ ನಗರ ರಸ್ತೆಗೆ 15ಲೋಡು ಮಣ್ಣು ಹಾಕಿ ರಸ್ತೆದುರಸ್ತಿಪಡಿಸುವರೇ ಸ್ಥಳಿಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 479: ಉಳ್ಳಾಲ ಪುರಸಭೆ ವ್ಯಾಪ್ತಿಯ 19ನೇ ವಾರ್ಡು ಗಣೇಶನಗರ,ಓವರ್‌ಬ್ರಿಡ್ಜ್ ತೊಕ್ಕೊಟ್ಟು ಎಂಬಲ್ಲಿ ಗಣಪತಿ ದೇವಸ್ಥಾನ, ನಾಗದೇವರು ಮತ್ತು ಗುಳಿಗಕಟ್ಟೆ ಸ್ಥಾಪಿಸಲು ಉದ್ದೇಶಿಸಿರುವ ಸ್ಥಳದಲ್ಲಿ ವಿದ್ಯುತ್ ಪರಿವರ್ತಕ ಇರುವುದರಿಂದ ಅದನ್ನು ಬೇರೆ ಕಡೆ ಸ್ಥಳಾಂತರಿಸುವಂತೆ ಅಧ್ಯಕ್ಷರು ಸಾರ್ವಜನಿಕ ಶ್ರೀ ಗಣೇಶ ಸೇವಾಸಮಿತಿ ಮತ್ತು ಸ್ಥಳೀಯ ಸದಸ್ಯರಾದ ಶ್ರೀದಯಾನಂದ ತೊಕ್ಕೊಟ್ಟು ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆಯುವುದಾಗಿ ನಿರ್ಣಯಿಸಲಾಯಿತು.

ವಿಷಯ:480: ಉಳ್ಳಾಲ ಪುರಸಭಾ ವ್ಯಾಪ್ತಿಯ 25ನೇ ವಾರ್ಡುನಶಿವಾಜಿನಗರ ಗಗನ್ ಪರ್ನಿಚರ್ ಬಳಿ ಪೈಪುಲೈನಿನ ಮೇಲೆ ಲಾರಿ ಹೋಗಿ ಒಡೆದು ಕೊಳವೆಯಲ್ಲಿಕೆಸರು ತುಂಬಿರುವುದರಿಂದ 2ಇಂಚಿನ 36ಮೀ ಕೊಳವೆ ಅಳವಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ರತ್ನಾವತಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:481: ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡುನ ಸೇವಂತಿಗುಡ್ಡೆ ಶೋಭಾರವರ ಮನೆ ಬಳಿ 20 ಮೀಟರ್ ಉದ್ದ 6ಮೀಟರ್ ಎತ್ತರದ ತಡೆಗೋಡೆ ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 482: ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡು ಸೇವಂತಿಗುಡ್ಡೆ ಶೇಖರನ ಮನೆ ರಸ್ತೆಯ ಎರಡು ಕಡೆ ರಸ್ತೆಗೆ 30ಮೀಟರ್ ಉದ್ದದ ತಡೆಗೋಡೆ ಮತ್ತು 40ಮೀಟರ್ ಉದ್ದ ಚರಂಡಿ ರಚನೆ ಮಾಡುವಂತೆ ಸ್ಥಳೀಯ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 483: ಉಳ್ಳಾಲ ಪುರಸಭಾ ವ್ಯಾಪ್ತಿಯ 26ನೇ ವಾರ್ಡು ಪಟ್ಲ ಮೋನಾಕನ ಮನೆ ಬಳಿ ಕೆಯುಐಡಿಎಫ್‌ಸಿ ರಸ್ತೆಗೆ 6 ಮೀಟರ್ ಉದ್ದದ ಮೋರಿ ರಚಿಸಿ ನಂತರ 100ಮೀಟರ್ ಉದ್ದದ ಚರಂಡಿ ರಚನೆ ಮಾಡುವಂತೆ ಸದಸ್ಯರಾದ ಶ್ರೀ ದಿನಕರ ಉಳ್ಳಾಲ್ ಇವರ ಮನವಿ ಕುರಿತು
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯಅಭಿಯಂತರರು ಸ್ಥಳ ಪರಿಶೀಲಿಸಿ ವರದಿಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 484: ಉಳ್ಳಾಲ ಪುರಸಭಾ ಕಚೇರಿಯ ಕಿಟಕಿಗಳಿಗೆ ವರ್ಟಿಕಲ್ ಬ್ಲೆಂಡ್ ಸ್ಕ್ರೀನ್‌ಗಳನ್ನು ಒದಗಿಸಿ ಅಳವಡಿಸಲು ಬಂದ ಕೋಟೇಶನುಗಳನ್ನು ಪರಿಶೀಲಿಸಿ ಮಂಜೂರು ಮಾಡುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಕೋಟೇಶನುಗಳನ್ನು ಪರಿಶೀಲಿಸಿ ಕನಿಷ್ಟ ದರ ಸೂಚಿಸಿದ ಸ್ವಪ್ನ ಎಂಟರ್‌ಪ್ರೈಸಸ್, ತೊಕ್ಕೊಟ್ಟು ಉಳ್ಳಾಲ ಇವರ ಕೋಟೇಶನುದರ ಚದರಅಡಿ ಒಂದಕ್ಕೆ ರೂ 80-00ರಂತೆ ರೂ. 4800-00ಕ್ಕೆ ಒಪ್ಪಿ ಮಂಜೂರು ಮಾಡಲು ನಿರ್ಣಯಿಸಲಾಯಿತು.

ವಿಷಯ:485: ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡು ಪಾಂಡೇಲಪಕ್ಕ ಅಜ್ಜಿಹಿತ್ಲು ಎಂಬಲ್ಲಿ ರಸ್ತೆಯ ಮದ್ಯದಲ್ಲಿರುವ 2 ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವರೇ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಮೆಸ್ಕಾಂ ಇಲಾಖೆಗೆ ಪತ್ರ ಬರೆದು ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:486: ದಿನಾಂಕ 5-4-2009ರಂದು ಮತ್ತು 12-4-2003ರಂದು ನಡೆಯುವ ಅಂತರ್ ಜಿಲ್ಲಾ ಮಟ್ಟದ ವಾಲಿಬಾಲ್ ಮತ್ತು ಕಬಡ್ಡಿ ಪಂದಾಟ್ಯಕ್ಕೆ ಸಹಾಯಧನ ಒದಗಿಸುವ ಕುರಿತು ಅಧ್ಯಕ್ಷರು, ಉಳ್ಳಾಲ ಸ್ಪೋಟಿಂಗ್ ಅಸೋಸಿಯೇಶನ್ ಮತ್ತು ಉಳ್ಳಾಲ ಸ್ಪೋರ್ಟ್ ಕ್ಲಬ್ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ರೂ. 2000/- ನೀಡುವುದಾಗಿ ನಿರ್ಣಯಿಸಲಾಯಿತು.

ವಿಷಯ: 487: ಉಳ್ಳಾಲ ಪುರಸಭಾ ವ್ಯಾಪ್ತಿಯ 11ನೇ ವಾರ್ಡು ಕಡಪರ ಮಸೀದಿಗೆ ಹೋಗುವ ರಸ್ತೆಗೆ 5 ಲೋಡು ಮಣ್ಣು ಹಾಕಿ ದುರಸ್ತಿ ಪಡಿಸುವರೇ ಸ್ಥಳೀಯ ಸದಸ್ಯರಾದ ಶ್ರೀಮತಿ ಸ್ಟೆಲ್ಲಾ ಡಿಸೋಜ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:488: ಉಳ್ಳಾಲ ಪುರಸಭಾ ವ್ಯಾಪ್ತಿಯ 8ನೇ ವಾರ್ಡಿನ ಬಂಡಸಾಲೆ ಒಂದನೇ ಕ್ರಾಸ್ ರಸ್ತೆ ಚರಂಡಿಗೆ 2 ಇಂಚು ಕಾಂಕ್ರೀಟು ಪೈಪು ಅಳವಡಿಸಿ ಮಣ್ಣು ಹಾಕಿ ಸಮತಟ್ಟು ಮಾಡುವ ಬಗ್ಗೆ ಸ್ಥಳೀಯ ಸದಸ್ಯರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುಪಟ್ಟಿ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 489: ಉಳ್ಳಾಲ ಪುರಸಭಾ ವ್ಯಾಪ್ತಿಯ 15ನೇ ವಾರ್ಡಿನ ಅಬ್ಬಂಜರ, ದೇವಸ್ಥಾನದ ಮೇಲೆ ಹೋಗುವ ದಾರಿ ಅಭಿವೃದ್ಧಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಮಹಾಲಕ್ಷ್ಮಿ ಇವರ ಮನವಿ ಕುರಿತು.
ನಿರ್ಣಯ: 2008–09ನೇ ಸಾಲಿನ ರಸ್ತೆ ದುರಸ್ತಿ ಮತ್ತು ನಿರ್ವಹಣೆ ಬಜೆಟ್ ಅನುದಾನ ಲೆಕ್ಕ ಶೀರ್ಷಿಕೆಯ 7(237ಜಿ) ರೂ 29–00 ಲಕ್ಷದಲ್ಲಿ ಸ್ಥಳೀಯ ಸದಸ್ಯರಿಗೆ ಮೀಸಲಿರಿಸಿದ ಅನುದಾನದಲ್ಲಿ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 490: ಉಳ್ಳಾಲ ಪುರಸಭಾ ವ್ಯಾಪ್ತಿಯ 2ನೇ ವಾರ್ಡು ಬರಕಾ ಎದುರು ರಸ್ತೆ ಅಭಿವೃದ್ಧಿಪಡಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀ ಆಶ್ರಫ್ ಬಾವ ಇವರ ಮನವಿ ಕುರಿತು.
ನಿರ್ಣಯ: 2008–09ನೇ ಸಾಲಿನ ರಸ್ತೆ ದುರಸ್ತಿ ಮತ್ತು ನಿರ್ವಹಣೆ ಬಜೆಟ್ ಅನುದಾನ ಲೆಕ್ಕ ಶೀರ್ಷಿಕೆಯ 7(237ಜಿ) ರೂ 29–00 ಲಕ್ಷದಲ್ಲಿ ಸ್ಥಳೀಯ ಸದಸ್ಯರಿಗೆ ಮೀಸಲಿರಿಸಿದ ಅನುದಾನದಲ್ಲಿ ಕಾಮಗಾರಿ ನಿರ್ವಹಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:491: ಉಳ್ಳಾಲ ಪುರಸಭಾ ಅಧೀನಕ್ಕೊಳಪಟ್ಟ 72 ಸ್ಟಾಲುಗಳ ಅವಧಿಯು ದಿನಾಂಕ 31-3-2009ರಂದು ಮುಕ್ತಾಯವಾಗುವುದರಿಂದ ಮುಂದಿನ 2 ವರ್ಷಗಳಿಗೆ ಮುಂದುವರಿಸುವರೇ ಪುರಸಭಾ ಸ್ಟಾಲುನ ಬಾಡಿಗೆದಾರರ ಒಕ್ಕೂಟದ ಅಧ್ಯಕ್ಷರು ಬರಕೊಂಡ ಪತ್ರ ದಿನಾಂಕ 3–2–2009ರ ಕುರಿತು ಮತ್ತು ಕಚೇರಿ ಟಿಪ್ಪಣಿ.
ನಿರ್ಣಯ: 1964ನೇ ಕರ್ನಾಟಕ ಪುರಸಭೆಗೆ ಅಧಿನಿಯಮ 72(2)ರ ಪ್ರಕಾರ ಪುರಸಭಾ ವ್ಯಾಪ್ತಿಯ 72 ಸ್ಟಾಲುಗಳಿಗೆ ಶೇಕಡಾ 10ರಷ್ಟು ಶುಲ್ಕ ಹೆಚ್ಚುವರಿ ಮಾಡಿ ಪರಿಷ್ಕರಿಸಿ ಮುಂದಿನ ಎರಡು ವರ್ಷಗಳಿಗೆ (31–3–2011) ವಹಿಸಿಕೊಡುವುದಾಗಿ ನಿರ್ಣಯಿಸಲಾಯಿತು.

ವಿಷಯ:492: ಉಳ್ಳಾಲ ಪುರಸಭೆ ವ್ಯಾಪ್ತಿಯ 23ನೇ ವಾರ್ಡು ಲಕ್ಷ್ಮಿ ಮನೆ ಬಳಿಯಿಂದ ಕೊರ್ದಬ್ಬು ದೇವಸ್ಥಾನದತನಕ ರಸ್ತೆ ಕಾಂಕ್ರೀಟಿಕರಣ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುವೆಚ್ಚ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 493: ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡು ಕೆರೆಬೈಲು ಗುಡ್ಡೆ ಅಜ್ಜನಕಟ್ಟೆ ಮೇಲಿನ ರಸ್ತೆಯಿಂದ ವಸಂತಿ ಮನೆ ಬಳಿ ಮೋರಿ ರಚನೆ ಮಾಡುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ ಇವರ ಮನವಿ ಕುರಿತು.

ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುವೆಚ್ಚ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:494:ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡಿನಲ್ಲಿ ಕಾಸಿಮ್ ಬ್ಯಾರಿ ಮನೆಯಿಂದ ರೋಹಿತ್ ಮನೆ ಬಳಿ ಚರಂಡಿಗೆ ಮುಚ್ಚಿಗೆ ಹಾಕುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುವೆಚ್ಚ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:495: ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡಿನ ಬೇಬಿ ಮನೆಯಿಂದ ರೋಹಿತ್ ಮನೆತನಕ ಚರಂಡಿ ರಚನೆ ಮಾಡುವ ಬಗ್ಗೆ ಸ್ಥಳೀಯ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುವೆಚ್ಚ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ:496: ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡಿನ ಡೇಜಿ ಮನೆಯಿಂದ ಕ್ರಿಸ್ಟನ್ ಮನೆತನಕ ದಾರಿ ಅಗಲಗೊಳಿಸುವ ಬಗ್ಗೆ ಸ್ಥಳೀಯ ಸದಸ್ಯರಾದ ಶ್ರೀಮತಿ ಸುಹಾಸಿನಿ ಇವರ ಮನವಿ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕಿರಿಯ ಅಭಿಯಂತರರು ಸ್ಥಳ ಪರಿಶೀಲಿಸಿ ವರದಿ ಮಂಡಿಸಿ ಅಂದಾಜುವೆಚ್ಚ ತಯಾರಿಸಿ ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 497: ಉಳ್ಳಾಲ ಪುರಸಭಾ ವ್ಯಾಪ್ತಿಯ ಕಲ್ಲಾಪು ಮುನಾವರ್ ಮಸೀದಿಯ ತೆರೆದಬಾವಿಯ ಹೂಳೆತ್ತಿ ಸ್ವಚ್ಛಗೊಳಿಸುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 498: ಉಳ್ಳಾಲ ಪುರಸಭಾ ವ್ಯಾಪ್ತಿಯ ಮೇಲಂಗಡಿ ಕಿರುನೀರು ಸರಬರಾಜು ಯೋಜನೆಯ ಬೋರ್‌ವೆಲ್ ಸ್ವಚ್ಛಗೊಳಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 499: ಉಳ್ಳಾಲ ಪುರಸಭಾ ವ್ಯಾಪ್ತಿಯ 23ನೇ ವಾರ್ಡುನ ತೊಕ್ಕೋಟ್ಟು ವಾಣಿಜ್ಯ ಸಂಕೀರ್ಣದ ಹಿಂದುಗಡೆ ಇರುವ ಬಾವಿಯಲ್ಲಿ ಕೆಸರು ತುಂಬಿ ನೀರಿನ ಒರತೆ ಮುಚ್ಚಿಹೋಗಿದ್ದು ಬಾವಿಯ ಹೂಳನ್ನು ತೆಗೆಯುವ ಬಗ್ಗೆ.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಕೋಟೇಶನು ಕರೆದು ಕಾಮಗಾರಿ ಮಾಡಿಸುವುದಾಗಿ ನಿರ್ಣಯಿಸಲಾಯಿತು.

ವಿಷಯ: 500: ಉಳ್ಳಾಲ ಪುರಸಭೆಯ 2009-2010ನೇ ಸಾಲಿನ ಆಯವ್ಯಯ ಪತ್ರವನ್ನು ಮುದ್ರಿಸುವ ಬಗ್ಗೆ ಬಂದ ಕೊಟೇಶನುಗಳನ್ನು ಪರಿಶೀಲಿಸುವ ಕುರಿತು.
ನಿರ್ಣಯ: ಈ ಬಗ್ಗೆ ಚರ್ಚಿಸಲಾಗಿ ಬಂದ ಕೋಟೇಶನುಗಳನ್ನು ಪರಿಶೀಲಿಸಲಾಯಿತು. ಬಂದ ಕೊಟೇಶನುಗಳಲ್ಲಿ ಅತೀ ಕಡಿಮೆ ದರ ಸೂಚಿಸಿದ ಮೇ ಜ್ಯೋತಿ ಪ್ರಿಂಟರ್ಸ್, ಬಸ್ತಿಪಡ್ಪು, ಉಳ್ಳಾಲ ಇವರ ದರ ರೂ 5345-00ವನ್ನು ಒಪ್ಪಿ ಮಂಜೂರು ಮಾಡಲಾಯಿತು.

ಸಹಿ. ಅಧ್ಯಕ್ಷರು ಮತ್ತು ಸದಸ್ಯರು

(ಯಥಾಪ್ರತಿ)

ಮುಖ್ಯಾಧಿಕಾರಿ
ಉಳ್ಳಾಲ ಪುರಸಭೆ,ದ.ಕ